ಸಿಸಿ ನಂ.226/2012
ಪಿಡಬ್ಲೂ.23

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
**ಸಿ ಸಿ ನಂ.226/2012**

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಶಿವಾನಂದ ರಾಮಯ್ಯನವರ | ಪಿಡಬ್ಲೂ | ಃ | 23 |
| ತಂದೆಯ ಹೆಸರು | ಃ | ಸಿದ್ದಪ್ಪ | ಸಿಡಬ್ಲೂ | ಃ | 19 |
| ವಯಸ್ಸು | ಃ | 56 ವರ್ಷ | | | |
| ಉದ್ಯೋಗ | ಃ | ಸಹಾಯಕ ಕಂದಾಯ ಅಧಿಕಾರಿ | | | |
| ವಾಸ ಸ್ಥಳ | ಃ | ನವನಗರ | | | |

**ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 03/10/2019**
**ಮುಖ್ಯ ವಿಚಾರಣೆ ಎಪಿಪಿ ಯವರಿಂದ ಃ**

ನಾನು 1997 ರ ಸಮಯದಲ್ಲಿ ಹು-ಧಾ ಮಹಾನಗರ ಪಾಲಿಕೆಯ ಲೆಕ್ಕಪತ್ರ ವಿಭಾಗದಲ್ಲಿ ಎಸ್.ಡಿ.ಎ ಅಂತಾ ಕೆಲಸ ಮಾಡಿರುತ್ತೇನೆ. 5 ನೇ ಆರೋಪಿಯು ನಮ್ಮದೇ ಇಲಾಖೆಯಲ್ಲಿ ಇಂಟರ್ನಲ್ ಆಡಿಟರ್ ಅಂತಾ ಇದ್ದರು. 6 ನೇ ಆರೋಪಿಯು ಅಕೌಂಟೆಂಟ್ ಆಗಿದ್ದರು. 7 ನೇ ಆರೋಪಿಯು ಚೀಪ್ ಅಕೌಂಟ್ಸ ಆಫೀಸರ ಆಗಿದ್ದರು.

ಸರ್ಕಾರದಿಂದ ವಿವಿಧ ಯೋಜನೆಯಡಿಯಲ್ಲಿ ಬರತಕ್ಕ ಅನುಧಾನಗಳನ್ನು ಹು-ಧಾ ಪಾಲಿಕೆಯ ಖಾತೆಗೆ ಜಮಾ ಮಾಡಿಸುವುದು ಹಾಗೂ ಅದರ ಲೆಕ್ಕಪತ್ರವನ್ನು ಇಡುವ ಕೆಲಸ ಮಾಡುತ್ತಿದ್ದರು. ಹು-ಧಾ ಪಾಲಿಕೆಯ ಸಂಬಂದಪಟ್ಟ ಕೆಲಸಗಳನ್ನು ಇಂಜೀನಿಯರಗಳ ಮೂಲಕ ಮಾಡಿಸುತ್ತಿದ್ದರು. ಸದರಿ ಇಂಜೀನಿಯರುಗಳಿಗೆ ಕೆಲಸ ಮಾಡಿದ ಬಾಬತ್ತಿನ ಹಣವನ್ನು ಚೆಕ್ಕ ಮೂಲಕ ಕೊಡುತ್ತಿದ್ದೇವು. ಇಂತಹ ಚೆಕ್ಕುಗಳು ಮೊದಲು ಇಂಟರ್ನಲ್ ಆಡಿಟರ್ ನಂತರ ಅಕೌಂಟೆಂಟ್ ಹಾಗೂ ತದನಂತರ ಚೀಪ ಅಕೌಂಟ್ಸ ಆಫೀಸರ ಮೂಲಕ ಪಾಸ ಆದ ಮೇಲೆ ನಾನು ಚೆಕ್ಕನ್ನು ಬರೆಯುವ ಕೆಲಸ ಮಾಡುತ್ತಿದ್ದೇನು. ಚೆಕ್ಕುಗಳನ್ನು ಬರೆದ ನಂತರ ಚೆಕ್ಕ ರಜಿಸ್ಟರನಲ್ಲಿ ಆ ಬಗ್ಗೆ ನಮೂದು ಮಾಡುತ್ತಿದ್ದೇನು. ಕ್ಯಾಷ ಪುಸ್ತಕವನ್ನು ನಾನೇ ಬರೆಯುತ್ತಿದ್ದೇನು.

2000 ನೇ ಇಸ್ವಿಯ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಧಾರವಾಡದ ಕೆಲವು ಕಾಮಗಾರಿಗಳು ನಕಲಿ ಕಾಮಗಾರಿಗಳು ಅಂತಾ ವಿಷಯ ಪ್ರಸ್ತಾಪವಾಯಿತು. ಆ ಬಗ್ಗೆ ಚಾಸಾ 1 ರವರು ಪಾಲಿಕೆಯ ಪರವಾಗಿ ಪೊಲೀಸ ದೂರನ್ನು ಕೊಟ್ಟರು. ಆಗ ಪೊಲೀಸರು ನನ್ನನ್ನು ವಿಚಾರಣೆ ಮಾಡಿದರು. ಸುಮಾರು 200 ಕ್ಕೂ ಹೆಚ್ಚಿನ ಕಾಮಗಾರಿಗಳು ನಕಲಿ ಕಾಮಗಾರಿಗಳು ಅಂತಾ ಕಂಡು ಬಂದಿತು ಅದರ ಒಟ್ಟು ಮೊತ್ತ ಸುಮಾರು 20 ಲಕ್ಷ ಅಂತಾ

ಕೂಡಾ ಕಂಡು ಬಂದಿತು. ಈ ವ್ಯವಹಾರಕ್ಕೆ ಸಂಬಂದಪಟ್ಟ ಚೆಕ್ಕು , ಬಟವಾಡೆ ರಜಿಸ್ಟರ , ಕ್ಯಾಷ ಪುಸ್ತಕಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ.

ಈ ಹಂತದಲ್ಲಿ ಸಂಬಂದಪಟ್ಟ ತನಿಖಾಧಿಕಾರಿ ಸದರಿ ಮೂಲ ದಾಖಲಾತಿಗಳನ್ನು ಹಾಜರು ಮಾಡಿದ ನಂತರ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದುವರೆಸಬೇಕು ಮಾನ್ಯ ಸಸಅ ರವರು ಸಮಯ ಕೇಳಿದ್ದು, ಸದರಿ ತನಿಖಾಧಿಕಾರಿಗೆ ಸೂಕ್ತ ನಿರ್ದೇಶನ ಹಾಗೂ ರಿಮೈಂಡರಗಳನ್ನು ಕೊಟ್ಟಿದ್ದರು ಕೂಡಾ ಸದರಿ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಆದ್ದರಿಂದ ಮಾನ್ಯ ಸಸಅ ರವರ ಪ್ರಾರ್ಥನೆಯನ್ನು ತಳ್ಳಿ ಹಾಕಲಾಯಿತು.

**<u>ಪಾಟೀ ಸವಾಲು</u> : 3 ನೇ ಆರೋಪಿ ಪರ ಶ್ರೀ ಎಲ್ ಎಮ್ ಎಸ್ ವಕೀಲರಿಂದಃ**

ಬಿಲ್ಲನ್ನು ನೋಡಿ ಚೆಕ್ಕುಗಳನ್ನು ಬರೆಯುವುದು ನನ್ನ ಕೆಲಸ ಎಂದರೆ ನಿಜ. ಯಾರ ಹೆಸರಿಗೆ ಚೆಕ್ಕುಗಳನ್ನು ಕೊಡುತ್ತೇವೊ ಅವರುಗಳ ಸಹಿಗಳನ್ನು ಚೆಕ್ಕ ರಜಿಸ್ಟರನಲ್ಲಿ ಪಡೆಯುತ್ತೇವೆ ಎಂದರೆ ನಿಜ. 268 ಕೆಲಸಗಳು ಕೂಡಾ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ಮೊತ್ತದ ಕಾಮಗಾರಿಗಳಾಗಿದ್ದವು ಎಂದರೆ ನಿಜ. ಒಂದು ಚೆಕ್ಕು ಮತ್ತು ಬಿಲ್ಲು ಯಾವ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಪಾಸು ಆಗುತ್ತದೆಯೋ ಆ ಇಲಾಖೆಯ ಸಂಬಂದಪಟ್ಟ ಅಧಿಕಾರಿ ಸೂಕ್ತ ಹಿಂಬರಹವನ್ನು ಬರೆಯಬೇಕಾಗುತ್ತದೆ ಎಂದರೆ ನಿಜ. ಚೆಕ್ಕು ಮತ್ತು ಬಿಲ್ಲು ಹಿಂದಿನ ಇಲಾಖೆಯವರು ಪಾಸು ಮಾಡಿದ ನಂತರವೇ ಮುಂದಿನ ಇಲಾಖೆಯವನ್ನು ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎಂದರೆ ನಿಜ.

**<u>ಪಾಟೀ ಸವಾಲು</u> : 4 ನೇ ಆರೋಪಿ ಪರ ಶ್ರೀ ಆರ್ ಬಿ ಹೆಚ್ ವಕೀಲರಿಂದಃ**

ಧಾರವಾಡದ ಯಾವ ವಾರ್ಡಿನಲ್ಲಿ ನಕಲಿ ಅಂತಾ ಹೇಳಲಾದ ಕಾಮಗಾರಿಗಳು ಆಗಿರುತ್ತವೆ ಎಂಬುವುದು ನನಗೆ ಗೊತ್ತಿಲ್ಲ. ಒಂದೊಂದು ಒಬ್ಬೊಬ್ಬ ಜ್ಯೂನಿಯರ ಇಂಜೀನಿಯರಗಳು ಇರುತ್ತಾರೆ ಎಂದರೆ ನಿಜ. ಆಯಾ ಜ್ಯೂನಿಯರ ಇಂಜೀನಿಯರಗಳಿಗೆ ಅವರವರ ಕೆಲಸಗಳನ್ನು ಹಂಚಿಕೊಟ್ಟಿರುತ್ತಾರೆ ಎಂದರೆ ನಿಜ. ಈ ಕೇಸಿನಲ್ಲಿಯ ವಾರ್ಡ ನಂಬರಿಗೂ ಹಾಗೂ 4 ನೇ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ. ಆ ಸಮಯದಲ್ಲಿ 4 ನೇ ಆರೋಪಿಯು ಯಾವ ವಾರ್ಡಿನಲ್ಲಿ ಕೆಲಸ ಮಾಡುತ್ತಿದ್ದರು ಎಂಬುವುದು ನನಗೆ ಗೊತ್ತಿಲ್ಲ.

ಪಾಲಿಕೆಗೆ ಸಂಬಂದಪಟ್ಟ ಯಾವುದೇ ಗುತ್ತಿಗೆ ಕಾಮಗಾರಿಗಳನ್ನು ನೊಂದಾಯಿತ ಗುತ್ತಿಗೆದಾರರಿಗೆ ಮಾತ್ರ ಕೊಡಬೇಕು ಎಂದರೆ ನಿಜ. ಈ ಕೇಸಿನ 8 ನೇ ಆರೋಪಿಯು ಪಾಲಿಕೆಯ ನೊಂದಾಯಿತ ಗುತ್ತಿಗೆದಾರ ಅಂತಾ ಹೇಳಲು ನಾನು ಆ ಬಗ್ಗೆ ದಾಖಲಾತಿಯನ್ನು ನೋಡಿಲ್ಲ. ಚೆಕ್ಕನ್ನು ಬರೆಯುವ ಪೂರ್ವದಲ್ಲಿ ಕೇಸ ಫೈಲನ್ನು ನೋಡುತ್ತೀರಿ ಎಂದರೆ ಸಾಕ್ಷಿಯು ನನ್ನ ಹತ್ತಿರ ಕೇಸ ಫೈಲ ಬರುವುದಿಲ್ಲ ಎನ್ನುತ್ತಾರೆ. ಚೆಕ್ಕುನ್ನು ಬರೆದಾದ ನಂತರ ಅದನ್ನು ಸಹಿಗೆ ಅಂತಾ ಪಿಯ್ಯುನಗಳ ಮೂಲಕ ಕಳುಹಿಸುತ್ತೇವೆ. ಸಹಿಗೆ ನಾವು ಬಿಲ್ಲು ಮತ್ತು ಚೆಕ್ಕ ಪುಸ್ತಕವನ್ನು ಮಾತ್ರ ಕಳುಹಿಸುತ್ತೇವೆ. ಚೆಕ್ಕನ್ನು ಸಹಿ ಮಾಡುವ ಪೂರ್ವದಲ್ಲಿ ಅದಕ್ಕೆ ಸಂಬಂದಪಟ್ಟ ಕೇಸ ಫೈಲುಗಳನ್ನು ವೆರಿಫೈ ಮಾಡುತ್ತಾರೆ. 4 ನೇ ಆರೋಪಿಗೂ ಹಾಗೂ ಈ ಕೇಸಿನಲ್ಲಿ ಹೇಳಿರುವ ಕಾಮಗಾರಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡಾ ಮಾಹಿತಿ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್ ಆರ್ ಎ ವಕೀಲರಿಂದಃ**

2 ನೇ ಆರೋಪಿ ಪರ ವಕೀಲರು ಮೇಲಿನ ವಕೀಲರುಗಳು ಮಾಡಿದ ಪಾಟೀ ಸವಾಲುಗಳನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎಮ್ ವಿ ಎಸ್ ವಕೀಲರ ಪರವಾಗಿ ಎಲ್ ಎಮ್ ಎಸ್ ವಕೀಲರುಃ**

5 ನೇ ಆರೋಪಿ ಪರ ವಕೀಲರು ಮೇಲಿನ ವಕೀಲರುಗಳು ಮಾಡಿದ ಪಾಟೀ ಸವಾಲುಗಳನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 7 ಮತ್ತು 8 ನೇ ಆರೋಪಿಗಳ ಪರ ವಕೀಲರಿಂದಃ**

7 ಮತ್ತು 8 ನೇ ಆರೋಪಿತರುಗಳು ಹಾಜರಿದ್ದು ಅವರ ಪರ ವಕೀಲರು ಗೈರು ಹಾಜರಾಗಿದ್ದರಿಂದ ಅವರ ಪಾಟೀ ಸವಾಲು ಇಲ್ಲಾ ಅಂತಾ ಪರಿಗಣಿಸಲಾಯಿತು.

**ಮರು ವಿಚಾರಣೆ : ಇಲ್ಲ**

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.